# ಹೂಡಿಕೆ ನಾನಾ ಬಗೆ

### 1. ಆಭರಣ, ನಾಣ್ಯ, ಗಟ್ಟಿ

ಬಂಗಾರವನ್ನು ಆಭರಣಗಳ ರೂಪದಲ್ಲಿ ಹೊಂದಬಹುದು. ಆದರೆ, ಅದರ ಮೌಲ್ಯ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತದೆ. ಮೇಕಿಂಗ್ ಶುಲ್ಕ, ಸವಕಳಿ ಮತ್ತಿತರ ಅಂಶಗಳು ಮೌಲ್ಯವನ್ನು ಕಡಿಮೆ ಮಾಡುತ್ತವೆ. ಹೂಡಿಕೆಯು ನಿಮ್ಮ ಉದ್ದೇಶವಾದರೆ ನಾಣ್ಯಗಳು ಮತ್ತು ಚಿನ್ನದ ಬಾರ್‌ಗಳ ರೂಪದಲ್ಲಿ ಖರೀದಿಸಿಸಬಹುದು.

### 2. ಕಂಪನಿ ಷೇರುಗಳ ಖರೀದಿ

ಭೌತಿಕ ಚಿನ್ನವನ್ನು ಹೊಂದಲು ಬಯಸದೇ ಇದ್ದಲ್ಲಿ, ಚಿನ್ನದ ಗಣಿಗಾರಿಕೆ ಕಂಪನಿಗಳಲ್ಲಿ ಷೇರುಗಳನ್ನು ಖರೀದಿಸಬಹುದು.

### 3. ಇಟಿಎಫ್‌ಗಳ ಮೂಲಕ ಹೂಡಿಕೆ

ಚಿನ್ನದ ವಿನಿಮಯ ವ್ಯಾಪಾರ ನಿಧಿಗಳಲ್ಲಿ (ಇಟಿಎಫ್‌ಗಳು) ಹೂಡಿಕೆ ಮಾಡಬಹುದು. ಎಲೆಕ್ಟ್ರಾನಿಕ್ ಮಾದರಿಯಲ್ಲಿ ಚಿನ್ನದ ಖರೀದಿ ಇಲ್ಲಿ ಆಗುತ್ತದೆ. ಡಿಜಿಟಲ್ ಅಥವಾ ಕಾಗದದ ರೂಪದಲ್ಲೂ ಇರಬಹುದು. ಯೂನಿಟ್ ಲೆಕ್ಕದಲ್ಲಿ ಇಲ್ಲಿ ಮಾರಾಟ ನಡೆಯುತ್ತದೆ. ಪ್ರತಿ ಯೂನಿಟ್ ಒಂದು ಗ್ರಾಮ್ ಚಿನ್ನಕ್ಕೆ ಸಮ. ಭದ್ರತೆ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ತಯಾರಿಕಾ ಶುಲ್ಕವೂ ಇಲ್ಲ.

### 4. ಚಿನ್ನದ ಮ್ಯೂಚುವಲ್ ಫಂಡ್

ಇಲ್ಲೂ ಹಣವನ್ನು ವಿನಿಯೋಗಿಸಬಹುದು. ಒಂದು ವರ್ಷದಲ್ಲಿ ಗೋಲ್ಡ್ ಮ್ಯೂಚುವಲ್ ಫಂಡ್‌ಗಳು ಶೇ.40.39ರಷ್ಟು ರಿಟರ್ನ್ಸ್ ನೀಡಿವೆ. ಇತರೆ, ಎಲ್ಲ ಆಸ್ತಿ ಸಾಧನಗಳನ್ನೂ ರಿಟರ್ನ್ಸ್‌ನಲ್ಲಿ ಮೀರಿಸಿವೆ. ವ್ಯವಸ್ಥಿತ ಹೂಡಿಕೆ ಯೋಜನೆ (ಸಿಪ್) ಚಿನ್ನವನ್ನು ಸಂಗ್ರಹಿಸಲು ಉತ್ತಮ ಮಾರ್ಗವಾಗಿದೆ. ಚಿನ್ನದಲ್ಲಿ ಹೂಡಿಕೆ ಮಾಡಲು ಡಿಮ್ಯಾಟ್ ಖಾತೆ ಅಗತ್ಯವಿಲ್ಲ.

### 5. ಡಿಜಿಟಲ್ ಗೋಲ್ಡ್ ಬೇಕಾ?

ಚಿನ್ನ ಖರೀದಿಸಲು ಅಂಗಡಿಗೆ ಹೋಗಬೇಕು. ಪೇಟಿಎಂ, ಫೋನ್‌ಪೇ ಸೇರಿದಂತೆ ಮೊಬೈಲ್ ವ್ಯಾಲೆಟ್ ಮೂಲಕವೂ ಡಿಜಿಟಲ್ ಗೋಲ್ಡ್ ಖರೀದಿಸಬಹುದು. ಕೆಲವು ಬ್ಯಾಂಕ್‌ಗಳೂ ಈ ಸೌಲಭ್ಯವನ್ನು ಈಗ ನೀಡಿವೆ. ಒಂದು ಗ್ರಾಮ್ ಬೇಕಾದರೂ ಖರೀದಿಸಬಹುದು. ಭೌತಿಕ ಚಿನ್ನವಾಗಿ ಬೇಕಾದರೂ ಬದಲಿಸಬಹುದು.

### 6. ಚಿನ್ನದ ಬಾಂಡ್ ಯೋಜನೆ

ಚಿನ್ನ ಖರೀದಿಸುವಾಗ ಅದರ ಶುದ್ಧತೆ ಬಗ್ಗೆ ಅನುಮಾನಗಳಿರುತ್ತವೆ. ಆಭರಣ ಖರೀದಿ ವೇಳೆ ವೇಸ್ಟೇಜ್, ವ್ಯಾಟ್ ಮತ್ತಿತರ ಹೊರೆಗಳು ಶೇ.35ರ ತನಕ ಇರುತ್ತವೆ. ಇನ್ನು ಆಭರಣಗಳನ್ನು ಧರಿಸಿ ಸಂತೋಷ ಪಡಬಹುದೇ ಹೊರತು, ಮಾರಾಟಕ್ಕೆ ಮುಂದಾದರೆ ಮೂಲ ಬೆಲೆಯಲ್ಲಿ ಒಂದಿಷ್ಟು ನಷ್ಟವನ್ನೂ ಅನುಭವಿಸಬೇಕಾಗುತ್ತದೆ. ಭೌತಿಕ ಚಿನ್ನವನ್ನು ಕಳ್ಳಕಾಕರಿಗೆ ಸಿಗದಂತೆ ಕಾಯ್ದುಕೊಳ್ಳುವುದು ಸಹ ಇನ್ನೊಂದು ದೊಡ್ಡ ಬಿಕ್ಕಟ್ಟು. ಲಾಕರ್‌ಗಳಲ್ಲಿ ಆಭರಣಗಳನ್ನು ಜೋಪಾನ ಮಾಡೋಣ ಎಂದರೆ ಅದಕ್ಕೆ ಬಾಡಿಗೆ ಮತ್ತಿತರ ಶುಲ್ಕಗಳನ್ನು ತೆರಬೇಕು. ಇದೆಲ್ಲಕ್ಕೂ ಉತ್ತರದಂತೆಯೇ ಚಿನ್ನದ ಬಾಂಡ್ ಎಸ್‌ಜಿಬಿ) ಯೋಜನೆ ರೂಪುಗೊಂಡಿದೆ. ಇಲ್ಲಿ ಚಿನ್ನದ ಗಟ್ಟಿ ಅಥವಾ ಆಭರಣದ ಬದಲು ಬಾಂಡ್ ಇರುತ್ತದೆ. ಮಗಳ ಮದುವೆಗೆ ಈಗಲೇ ಒಡವೆ ಮಾಡಿಸುವುದು ಏಕೆ ಎಂದು ಭಾವಿಸುವ ಪೋಷಕರಿಗೆ, ಈ ಯೋಜನೆ ಸೂಕ್ತವಾದುದು. ಇದಕ್ಕೆ ವಾರ್ಷಿಕ ಶೇ.2.5ರ ಬಡ್ಡಿ ಲಭ್ಯ. ತೆರಿಗೆ ವಿನಾಯಿತಿಯೂ ಇದೆ. ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಏರಿಕೆಯಾದಂತೆಯೇ, ಅದರ ಬೆಲೆಯು ನಿಮ್ಮ ಬಾಂಡ್‌ಗೆ ಸಿಗುತ್ತದೆ. ಅಂದರೆ, 2800 ರೂ.ಗೆ ನೀವು ಒಂದು ಗ್ರಾಮ್ ಚಿನ್ನದ ಬಾಂಡ್ ಖರೀದಿಸಿದ್ದರೆ, ಬಾಂಡ್ ಅವಧಿ ಮುಗಿದಾಗ ಮಾರುಕಟ್ಟೆಯಲ್ಲಿ ಚಿನ್ನದ ದರ ೩,೮೦೦ ಮುಟ್ಟಿದ್ದರೆ ಅಷ್ಟೇ ಮೊತ್ತ ಸಿಗುತ್ತದೆ. ಜತೆಗೆ ವಾರ್ಷಿಕ ಶೇ. 2.5ರಷ್ಟು ನಿಶ್ಚಿತ ಬಡ್ಡಿಯೂ ಲಭ್ಯ.

ಹೀಗೆಯೇ ಸಾಗಬಹುದು. 2021ರ ಹೊತ್ತಿಗೆ ಶೇ. 30ರಷ್ಟು ಏರಿಕೆಯಾಗಿ, 68 ಸಾವಿರ ರೂಪಾಯಿ ಮುಟ್ಟಿದರೂ ಅಚ್ಚರಿಯಿಲ್ಲ’ ಎಂದು ವಿತ್ತತಜ್ಞರು ಅಂದಾಜು ಮಾಡಿದ್ದಾರೆ.

2020ರ ಮೊದಲ ಭಾಗದಲ್ಲಿಯೇ ಚಿನ್ನವು ಎರಡಂಕಿ ರಿಟರ್ನ್ಸ್ ನೀಡಿದೆ. ದರ ಶೇ. 28ರಷ್ಟು ಏರಿಕೆಯಾಗಿದೆ. ಇದು ಕಳೆದ 9 ವರ್ಷಗಳಲ್ಲಿಯೇ ಗರಿಷ್ಠ ಹೆಚ್ಚಳ. ಸುರಕ್ಷಿತ ಹೂಡಿಕೆ ಎನ್ನಲಾಗುವ ಚಿನ್ನಕ್ಕೆ ಹಣ ಹಾಕಲು ಇದೊಂದು ‘ಚಿನ್ನದಂಥ ಅವಕಾಶ’ ಎನ್ನುವುದು ಈ ಉದ್ಯಮ ಪ್ರಮುಖರ ಶಿಫಾರಸು. ಆದರೆ, ‘ಭಾರತೀಯರಿಗೆ ಚಿನ್ನ ಖರೀದಿ ಮಾಡಲು ರೈಟ್ ಅಥವಾ ರಾಂಗ್ ಟೈಮ್ ಅನ್ನುವುದು ಇಲ್ಲ. ಮದುವೆ, ಹುಟ್ಟುಹಬ್ಬ ಸೇರಿದಂತೆ ಅಗತ್ಯವಿದ್ದಾಗ ಖರೀದಿ ಮಾಡಲು ಹಿಂದೇಟು ಹಾಕುವುದಿಲ್ಲ. ಹೂಡಿಕೆಯ ವಿಷಯದಲ್ಲಾದರೆ, ಎಷ್ಟು ಮತ್ತು ಯಾವ ರೂಪದಲ್ಲಿ ಚಿನ್ನ ಖರೀದಿಸುವಿರಿ, ಒಟ್ಟು ಹೂಡಿಕೆಯಲ್ಲಿ ಚಿನ್ನದ ಪಾಲೆಷ್ಟು ಎನ್ನುವ ಅಂಶಗಳನ್ನು ಮರೆಯಬಾರದು’ ಎನ್ನುವುದು ಹೂಡಿಕೆತಜ್ಞರ ಕಿವಿಮಾತು.

ಕಳೆದ ಕೆಲವೇ ವರ್ಷಗಳಲ್ಲಿ ಚಿನ್ನದ ದರವು ಶೇ. 45ರಷ್ಟು ಏರಿಕೆಯಾಗಿದೆ. ಸದ್ಯದ ದರ ಏರಿಕೆಯು ಚಿನ್ನ ಖರೀದಿಗೆ ಹೂಡಿಕೆದಾರರನ್ನು ಸೆಳೆಯುವಂತಿದೆ. ‘ಸದ್ಯಕ್ಕೇನೋ ಚಿನ್ನದ ದರ ಏರಿಕೆಗೆ ಪೂರಕವಾದ ಸಾಕಷ್ಟು ಅಂಶಗಳು ಕಾಣಿಸುತ್ತಿವೆ. ಆದರೆ, ಎಷ್ಟು ಕಾಲ ಹೀಗೆ ಮುಂದುವರಿಯುತ್ತದೆ


ಬಂಗಾರದೊಡವೆ ಬೇಕೆ... ನೀರೆ...